ಮಳೆಗಾಲದಲ್ಲಿ ಎರೆಹುಳು ಬೀಗತನದ ಮಾತುಕತೆಗೆ ಹೋಯಿತಂತೆ!

✍️ಶ್ರೀವಲ್ಲಿ ರೈ ಮಾರ್ಟೆಲ್



ಮಳೆಗಾಲ ಬಂದ ತಕ್ಷಣ ಎರೆಹುಳುಗಳು ತೇವಾಂಶದಿಂದ ಮೈತುಂಬಿಕೊಂಡು ದಪ್ಪಗಾಗುತ್ತವೆ. ಆಗ ಎರೆಹುಳುವಿಗೆ ಜೀವದಲ್ಲಿ ಕೊಂಚ ಶಕ್ತಿ ಬಂದು ಅಹಂಕಾರ ಹೆಚ್ಚಾಯಿತಂತೆ. 'ನಾನೇನು ಕಡಿಮೆಯಾ?' ಎಂದುಕೊಂಡು ಒಮ್ಮೆ ಎದುರಿಗೆ ಸಿಕ್ಕ ಹಾವಿನ ಬಳಿ "ನಿನ್ನ ಮಗಳನ್ನು ನನಗೆ ಮದುವೆ ಮಾಡಿ ಕೊಡುವೆಯಾ?" ಎಂದು ಕೇಳಿತಂತೆ.

ಹಾವಿಗೆ ನಗು ಬಂದಿತು. "ಕೊಂಚ ಮೈಗೆ ಮಾಂಸ ಬಂದ ತಕ್ಷಣ ಎರೆಹುಳುವಿನ ಕಾಲು ನೆಲದಲ್ಲೇ ನಿಲ್ಲುತ್ತಿಲ್ಲ" ಎಂದು ಮನಸ್ಸಿನಲ್ಲಿಯೇ ಅಂದುಕೊಂಡು, ಅದನ್ನು ಹೊರಗೆ ತೋರಿಸಿಕೊಳ್ಳದೆ ಹೀಗೆ ಹೇಳಿತು: "ಮಳೆಗಾಲ ಕಳೆಯಲಿ, ಬೇಸಿಗೆಯಲ್ಲಿ ಬಾ... ಆಗ ನೋಡೋಣ!"

ಮಳೆಗಾಲ ಕಳೆದು ಬೇಸಿಗೆ ಬಂದಾಗ ಎರೆಹುಳು ಒಣಗಿ ಸುರುಟಿಕೊಳ್ಳಲು ಶುರುವಾಯಿತು. ಏಳಲು ಕೂಡ ಶಕ್ತಿ ಇರಲಿಲ್ಲ, ಇನ್ನು ಬೀಗತನದ ಮಾತುಕತೆ ಎಲ್ಲಿಂದ ಬರಬೇಕು? ಬೀಗತನದ ಮಾತುಕತೆ ಕ್ಯಾನ್ಸಲ್!!

ಅದಕ್ಕೇ ತಿಳಿದವರು ಹೇಳುವುದು: "ಮಳೆಗಾಲದಲ್ಲಿ ಎರೆಹುಳು ಕೂಡ ಹೆಡೆ ಬಿಚ್ಚುತ್ತದೆ" ಎಂದು.

ನೀತಿ: ಸ್ವಲ್ಪ ಸಂಪತ್ತು ಅಥವಾ ಶಕ್ತಿ ಬಂದ ತಕ್ಷಣ ಹೆಚ್ಚು ಹಾರಾಡಬಾರದು.